152ನೆ6 ನಿ=72=(79) 4ಗ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ನಿಯಮ 72 ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:**

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಇದರಿಂದಾಗಿ ನಗರದಲ್ಲಿ 200 ಎಂಎಲ್‌ಡಿ ನೀರು ಕೊರತೆಯಾಗಲಿದೆ ಎಂದು ತಿಳಿದು ಬಂದಿದ್ದು, ನಗರದಲ್ಲಿ ನೀರು ಪೂರೈಸಲು ಇರುವ 11816 ಕೊಳವೆ ಬಾವಿಗಳಲ್ಲಿ ಈಗಾಗಲೇ 750ಕ್ಕೂ ಹೆಚ್ಚು ಕೊಳವೆ ಬಾವಿಗಳು ಬತ್ತಿಹೋಗಿರುತ್ತದೆ ಹಾಗೂ ಉಳಿಕೆ ಬಾವಿಗಳಲ್ಲಿ ಈಗಾಗಲೇ 200 ದಶಲಕ್ಷ ನೀರು ಕೊರತೆಯಾಗಿದೆ. ಈ ಕುರಿತು ಸರ್ಕಾರ ನೀರಿನ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಮತ್ತು ಮುಂಬರುವ ದಿನಗಳಲ್ಲಿ ಬೆಂಗಳೂರಿನ ನಾಗರೀಕರಿಗೆ ಬೇಸಿಗೆಗಾಲದಲ್ಲಿ ನೀರಿನ ಅಭಾವ ನೀಗಿಸಲು ಕೈಗೊಂಡಿರುವ ಜಾಗೃತಾ ಕಾರ್ಯಕ್ರಮಗಳ ಕುರಿತು ನಿಯಮ 72 ರಲ್ಲಿ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

- ಪ್ರಸ್ತುತ ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆ 1, 2, 3 ಮತ್ತು 4 ರ ಘಟ್ಟ, 1 ಮತ್ತು 2 ಹಂತಗಹಳ ಮೂಲಕ ಬೆಂಗಳೂರು ನಗರದ ನಾಗರಿಕರಿಗೆ 1450 ಎಂಎಲ್‌ಡಿ ಯಷ್ಟು ನೀರನ್ನು ದಿನಂಪ್ರತಿ ಪೂರೈಸುವ ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ. ಬೆಂಗಳೂರು ಜಲಮಂಡಳಿಯ ಸುಪರ್ದಿಯಲ್ಲಿ ಒಟ್ಟು 11,816 ಕೊಳವೆಬಾವಿಗಳಿದ್ದು, ಅವುಗಳಲ್ಲಿ ಅಂತರ್ಜಲ ಕುಸಿತದಿಂದ ಹಂತ ಹಂತವಾಗಿ 821 ಕೊಳವೆಬಾವಿಗಳು ಬತ್ತಿ ಹೋಗಿದ್ದು, ಪ್ರಸ್ತುತ 10995 ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿರುತ್ತದೆ.

- 2023ನೇ ವರ್ಷದಲ್ಲಿ ವಾಡಿಕೆ ಮಳೆಯಾಗದಿರುವ ಕಾರಣ ದಿನದಿಂದ ದಿನಕ್ಕೆ ಅಂತರ್ಜಲ ಮಟ್ಟವು ಕುಸಿಯುತ್ತಿರುವ ಕಾರಣ ಕೊಳವೆಬಾವಿಗಳು ಬತ್ತಿಹೋಗುತ್ತಿದ್ದು, ಬೆಂಗಳೂರು ಜಲ ಮಂಡಳಿ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ:

    1) ಕೊಳವೆಬಾವಿಗಳನ್ನು ದುರಸ್ಥಿಗೊಳಿಸಿ, ಸುಸ್ಥಿತಿಯಲ್ಲಿಡಲು ಕ್ರಮವಹಿಸಲಾಗುತ್ತಿದೆ.

    2) ಅಗತ್ಯ ಕಡೆಗಳಲ್ಲಿ ಕೊಳವೆ ಬಾವಿಗಳನ್ನು ಫ್ಲಷಿಂಗ್ ಮಾಡಲಾಗುತ್ತಿದೆ.

    3) ನಗರದಲ್ಲಿ ಅಂತರ್ಜಲ ಕುಸಿದಿರುವ ಪ್ರದೇಶಗಳ ಕೊಳವೆಬಾವಿಗಳಿಗೆ ನೀರಿನ ಲಭ್ಯತೆಗೆ ಅನುಗುಣವಾಗಿ 280ಕ್ಕೂ ಹೆಚ್ಚು ಸ್ಥಳಗಳಲ್ಲಿ ಹೆಚ್ಚುವರಿಯಾಗಿ ಸುಮಾರು 2100 ಜಿ.ಐ ಕೊಳವೆಗಳನ್ನು ಆಳಕ್ಕೆ ಇಳಿಸಿ ಜೋಡಣೆ ಮಾಡಲು ಕ್ರಮವಹಿಸಲಾಗುತ್ತಿದೆ.

    4) ನಗರದಲ್ಲಿ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಹೊಸ ಕೊಳವೆಬಾವಿಗಳನ್ನು ಕೊರೆಯಲು ಕ್ರಮವಹಿಸಲಾಗುತ್ತಿದೆ.

- ಮುಂದುವರೆದು, ಬೃಹತ್ ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರಿನ ನಾಗರಿಕರಿಗೆ ಬೇಸಿಗೆಗಾಲದಲ್ಲಿ ನೀರಿನ ಅಭಾವವನ್ನು ನೀಗಿಸಲು 110 ಹಳ್ಳಿಗಳ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಈ ಕೆಳಕಂಡಂತೆ ವಲಯವಾರು ಅನುದಾನ ಹಂಚಿಕೆ ಮಾಡಲಾಗಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

. . . 2 .

| Sl No | Zone | BBMP Grants Amount (Rs in Crs) | | 15th Finance (Rs 20.00 Crs) (Part-A) | | 15th Finance (Rs 20.00 Crs) (Part-B) | |
|---|---|---|---|---|---|---|---|
| | | Allocation | Remarks | Allocation | Remarks | Allocation | Remarks |
| 1 | Bommanahalli | 1.54 | Work in progress | 5.20 | Tender Invited | 3.00 | Action plan by 03.02.2024. Tender will be invited by 04.02.2024 |
| 2 | RR Nagara | 10.00 | | 8.00 | BWSSB deposit | 4.00 | |
| 3 | Mahadevapura | 9.90 | | 6.00 | Tender Invited | 5.00 | |
| 4 | Dasarahalli | 2.35 | | 0.00 | | 2.00 | |
| 5 | Yelahanka | 8.82 | | 0.80 | | 6.00 | |
| **Total** | | **32.61** | | **20.00** | | **20.00** | |

- ಬೆಂಗಳೂರು ನಗರದ ಒಳ ವಲಯದ ನಾಗರಿಕರಿಗೆ ಬೇಸಿಗೆಗಾಲದಲ್ಲಿ ನೀರಿನ ಅಭಾವ ನೀಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರು ಜಲಮಂಡಳಿಗೆ ಆದ್ಯತೆ ಮತ್ತು ಅಗತ್ಯತೆ ಅನುಗುಣವಾಗಿ ಸಹಾಯಧನವನ್ನು ಠೇವಣಿ ರೂಪದಲ್ಲಿ ನೀಡಲಾಗುತ್ತಿದ್ದು ಈಗಾಗಲೇ ಬೆಂಗಳೂರು ಜಲಮಂಡಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ.

- ಮುಂದುವರೆದಂತೆ, 15ನೇ ಹಣಕಾಸು ಆಯೋಗದ ನೀರು ಸರಬರಾಜು ಮತ್ತು ಒಳಚರಂಡಿ ಅನುದಾನದಲ್ಲಿ, ಹೊರವಲಯಗಳಿಗೆ ರೂ.72.6 ಕೋಟಿಗಳನ್ನು ಮತ್ತು ಒಳವಲಯಗಳಿಗೆ ರೂ.25.05 ಕೋಟಿಗಳನ್ನು ನೀಡಲಾಗಿದ್ದು, ಒಟ್ಟು 97.65 ಕೋಟಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವೆಚ್ಚ ಮಾಡಲಾಗಿರುತ್ತದೆ. ಈ ಯೋಜನೆಗಳ ಅಡಿಯಲ್ಲಿ ಬೆಂಗಳೂರು ನಗರದಲ್ಲಿ ನೀರಿನ ಅಭಾವವನ್ನು ನೀಗಿಸಲು ಜಾಗೃತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ನಅಇ 97 ಎಂಎನ್‌ವೈ 2024(ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ